ಹುಟ್ಟಿದಾಗಲೇ ನನ್ನ ಅಪ್ಪನನ್ನು 'ತಿಂದುಕೊಂಡೆ' ಅಂಥ ಪಟ್ಟ ಬೇರೆ ನನಗೆ ಬಂದಿತ್ತು. ಅಕ್ಕ ಅವ್ವನಿಗೆ ಹೇಳಿ ನನ್ನನ್ನು ತಾನೇ ಕರೆದುಕೊಂಡು ಹೋಗಿ ಸಾಕಿಕೊಂಡಿದ್ದಳಂತೆ. ಆದರೆ, ನಮ್ಮ ಜೊತೆ ಒಂದೂ ಗಂಡು ಮಗು ಹುಟ್ಟದೆ ಇದ್ದುದರಿಂದ ಅವ್ವ ಆಗಾಗ ಕೊರಗುತ್ತಲೇ ಇದ್ದಳು. ನನ್ನ ಗಂಡ ಸತ್ತಮೇಲೆ ಅವ್ವ ನನ್ನನ್ನು ಇನ್ನು ಅಕ್ಕನ ಮನೆಯಲ್ಲಿಯೇ ಬಿಡುವುದು ಬೇಡ ಎಂದು ನನಗೆ ಹೇಳಿ ಕರೆದುಕೊಂಡು ಬಂದು ಎರಡು ವರ್ಷವಾಗಿತ್ತು.

ಈಗ ನಾನು ಅವ್ವನ ಮನೆಯಿಂದ ಮತ್ತೆ ಅಕ್ಕನ ಮನೆಗೆ ಹೊರಟಿದ್ದೇನೆ; ಅವ್ವ ನನ್ನನ್ನು ಕಳಿಸಲು ಆಗಲ್ಲ ಅಂದರೂ ಅಕ್ಕ ತನ್ನ ಹಟ ಬಿಡದೆ ತನ್ನ ಮಾವನಿಗೆ ಉಷಾರಿಲ್ಲವೆಂದು, ತನಗೂ ಈಗೀಗ ಉಷಾರಿರುವುದಿಲ್ಲವೆಂದು ಹೇಳಿ, ನನ್ನನ್ನು ಕರೆದುಕೊಂಡು ಬಂದಿದ್ದಳು. ನನಗೆ ಈಗ ಸುಮಾರು ಹದಿನೇಳು ವರ್ಷ ಇರಬಹುದು. ನನಗೆ ಮತ್ತೆ ಅಕ್ಕನ ಮನೆಗೆ ಹೋಗಿ ದುಡಿಯಬೇಕಲ್ಲ ಎಂಬ ಚಿಂತೆ ಕಾಡುತ್ತಿತ್ತು. ಅವ್ವನ ಮನೆಯಲ್ಲಿ ಎಲ್ಲಾ ಮರೆತು ಎರಡು ವರ್ಷದಿಂದ ಹಾಯಾಗಿದ್ದೆ.

ಕುಳಿತಲ್ಲಿ ಮರದ ನೆರಳು ತಂಪಾಗಿದ್ದರೂ ಅದನ್ನು ಅನುಭವಿಸುವ ಸ್ಥಿತಿಯಲ್ಲೂ ನನ್ನ ಮನಸ್ಸು ಇರಲಿಲ್ಲ. ಅಕ್ಕ ಎದ್ದು, 'ನಡೀ, ನಡೀ ಹೊರಡು, ಬಿಸಿಲು ಸುಡ್ತಾ ಇದೆ' ಎನ್ನುತ್ತಾ ತಲೆಮೇಲೆ ಸೆರಗನ್ನು ಹೊದ್ದುಕೊಳ್ಳುತ್ತಾ, ನನಗೂ ತಲೆಮೇಲೆ ಸೀರೆ ಸೆರಗು ಹೊದ್ದುಕೊಂಡು ನಡೆಯಲು ಅವಸರಿಸಿದಳು. ಆದರೆ, ಈಗ ನಾನು ದೊಡ್ಡವಳಾಗಿದ್ದೇನೆ. ನಾನು ಓದಿದವಳಲ್ಲ, ಶಾಲೆಗೆ ಹೋಗಿ ಕಲಿತವಳಲ್ಲ. ಆದರೂ ಬೇರೆಯವರು ಹೇಳುವ ಹಾಗೆ ದೇವರು ನನಗೆ ಚೆಲುವನ್ನು ಕೊಟ್ಟಿದ್ದಾನೆ. ಹಿಂದೆ ಅಕ್ಕ ನನ್ನನ್ನು ತನ್ನೂರಿಗೆ ಕರೆದೊಯ್ದಾಗ ಶಾಲೆಗೆ ಸೇರಿಸಿದ್ದರೆ ನಾನೂ ಓದುತ್ತಿದ್ದನೇನೋ! ಆದರೆ ಆಕೆ ನನ್ನನ್ನು ತನ್ನ ಮನೆಕೆಲಸಕ್ಕೆ, ಹೊರಗೆ ಆಡು ದನಗಳ ಕಾಯುವ ಕೆಲಸಕ್ಕೆ ಹಚ್ಚಿದ್ದಳು. ನಾನು ನೋಡುವುದಕ್ಕೆ ಮುದ್ದು ಮುದ್ದಾಗಿ ಕೆಂಪಗೆ ಇದ್ದುದು ಕಂಡು ಊರಿನ ಸಿದ್ದೇಗೌಡರ ಮಗನೂ ಆಡು ಕಾಯಲು ನನ್ನ ಜೊತೆ ಬರುವಾಗ ಅವನು ನನ್ನನ್ನೇ ಮುದ್ದಿಸುವಂತೆ ನೋಡುತ್ತಿದ್ದ. ನೋಡಿದವರು ನನ್ನನ್ನು ರೇಗಿಸುತ್ತಿದ್ದದ್ದು ನನಗಿನ್ನೂ ನೆನಪಿದೆ.

ಅಕ್ಕನ ಮನಸ್ಸಿನಲ್ಲಿ ಈಗ ಏನಿದೆ ಎಂಬುದು ನನಗೆ ಒಂದೂ ಅರ್ಥವಾಗುತ್ತಿಲ್ಲ. ಎರಡು ವರ್ಷದ ಹಿಂದೆ ಇದೇ ದಾರಿಯಲ್ಲಿ ಅಕ್ಕನ ಮನೆಯಿಂದ ನನ್ನವ್ವನ ಮನೆಗೆ ಬಂದಿದ್ದು ನೆನಪಿದೆ. ಮತ್ತೆ ಅದೇ ದಾರಿಯಲ್ಲಿ ಮರಳಿ ಈಗ ಅಕ್ಕನ ಮನೆಗೇ ಹೋಗುತ್ತಿದ್ದೇನೆ. ಈಗಾಗಲೇ ಜೀವನದಲ್ಲಿ ಸೊರಗಿರುವ ನನ್ನ ಮೇಲೆ ಮತ್ತೆ ಅಕ್ಕನ ಸವಾರಿ ಏಕೆ? ಆದರೂ ಅವಳನ್ನು ಏನಾದರೂ ಕೇಳುವ ಅಂದರೆ ಚಿಕ್ಕಂದಿನಿಂದಲೂ ನನಗೆ ಅವಳ ಬಗ್ಗೆ ಭಯ. ಆದರೆ, ದೇವರ ಮೇಲೆ ಭಾರ ಹಾಕಿ ಮನಸ್ಸನ್ನು ಬಿಗಿಯಾಗಿ ಹಿಡಿದುಕೊಂಡು ನಡೆದು ಬಂದೆ.

2

ಅಕ್ಕನ ಮನೆಗೆ ಬಂದಾಗ ಮೂಲೆಯ ಕತ್ತಲೆಯಲ್ಲಿ ಮಲಗಿದ್ದ ಮಾವ ನನ್ನನ್ನು ಕಂಡು ಗೆಲುವಾದರು. ಮಾವನಿಗೆ ನನ್ನ ಮೇಲೆ ಮೊದಲಿನಿಂದಲೂ ಮಮತೆ. ಅವರು ತಮಗೆ ಮಕ್ಕಳಿಲ್ಲದಿದ್ದರೂ ನನ್ನನ್ನು ತಮ್ಮ ಮಗಳಂತೆಯೇ ತುಂಬಾ ಅಕ್ಕರೆಯಿಂದ ನೋಡುತ್ತಿದ್ದರು. ಅವರು ನನ್ನನ್ನು ಒಂದಿನವೂ ಗದರಿದವರಲ್ಲ, ರೇಗಿದವರಲ್ಲ. ಅವರು ಪೇಟೆಗೆ ಹೋದಾಗಲೆಲ್ಲಾ ನನಗೆ ಕಾಯಿ ಮಿಠಾಯಿ ತಿಂಡಿ ತಿನಿಸು ತಂದುಕೊಡುತ್ತಿದ್ದರು. ನಾನು ಮನೆಗೆ ಬಂದುದನ್ನು ಕಂಡು ಮಲಗಿದ್ದ ಮಾವ ಎದ್ದು ಕೂತು 'ಬಾರವ್ವ!' ಎಂದು ಹತ್ತಿರ ಕರೆದು ಕೂರಿಸಿಕೊಂಡು ನನ್ನ ಕಷ್ಟಸುಖ ಕೇಳಿದರು. ನಾನು ಬೇಡ ಅಂದರೂ ಅವರೇ ಎದ್ದು ಹೋಗಿ ಕಾಫಿ ಮಾಡಿಕೊಂಡು ಬಂದು, 'ನಡೆದು ಬಂದು ಸಾಕಾಗಿದ್ದೀರಿ!' ಎಂದು ಹೇಳಿ ನಮಗೆ ಕಾಫಿ ಕೊಟ್ಟರು. ದಾರಿಯುದ್ದಕ್ಕೂ ಗೆಲುವಾಗಿಯೇ ಬಂದ ಅಕ್ಕ ಈಗ 'ನನಗೆ ಸಾಕಾಯ್ತು, ನನ್ನ ಕಾಲುಗಳು ಬಿದ್ದು ಹೋದೋ! ನಾನು ಮಲಗ್ತೀನಿ' ಅಂಥ ಹೇಳಿ ಮಲಗೇ ಬಿಟ್ಟಳು.

ಅಕ್ಕ 'ಮಾವನಿಗೆ ಉಷಾರಿಲ್ಲ. ಹಾಸಿಗೆ ಹಿಡಿದು ಮಲಗಿ ಮೂರು ತಿಂಗಳಾಯ್ತು. ನನಗೊಬ್ಬಳಿಗೇ ಅವರನ್ನು, ಮನೆಯನ್ನು, ನೋಡಿಕೊಳ್ಳುವುದು ಕಷ್ಟವಾಗ್ತ ಇದೆ. ನೀನು ಬಂದು ನನ್ನ ಈ ಕಷ್ಟಕ್ಕೆ ಆಗು' ಅಂಥ ನನ್ನ ಹತ್ತಿರ, ನನ್ನ ಅವ್ವನ ಹತ್ತಿರ ಗೋಗರೆದಾಗ, ನಾನು ಹೋಗಲ್ಲ ಅಂದರೂ ನನ್ನವ್ವ 'ಇಂಥ ಕಷ್ಟಕ್ಕೆ ಹೋಗದೆ ಇದ್ದರೆ ಹೇಗೆ? ಮೊದಲು